# ಆಹಾ ಸುದ್ದಿ!

★ ಸಸಿತೋಟ



ಮಿಶಿಗನ್‌ನ 18ರ ಹುಡುಗಿ ಟ್ವಿನ್ ಲೇಕ್ ನಾಲಿಗೆಯ ಉದ್ದ ಬರೋಬ್ಬರಿ 4 ಇಂಚಂತೆ. ಆಕೆ ಹೀಗೆ ಅಳತೆ ಪಟ್ಟಿ ಹಿಡಿದು ನಿಂತ ಫೋಟೊ ಆನ್‌ಲೈನ್‌ನಲ್ಲಿ ಸುದ್ದಿ ಮಾಡಿದೆ. ಅಧಿಕ ಪ್ರಸಂಗ ಮಾಡದಿದ್ದರೂ 'ನಾಲಿಗೆ ಬಹಳ ಉದ್ದ ಆಯ್ತು' ಎನ್ನಬಹುದು.

ಅಪಘಾತದಿಂದ ನೆನಪಿನ ಶಕ್ತಿ ಕಳೆದುಕೊಂಡವರಿದ್ದಾರೆ. ಆದರೆ ಕೊಲರೆಡೋದಲ್ಲಿ ಪಶು ಸಂಗೋಪನೆ ಮಾಡುತ್ತಿದ್ದ ಲೇಹ್ ಎಂಬಾಕೆಗೆ ಅಪಘಾತದಲ್ಲಿ ತಲೆಗೆ ಬಿದ್ದ ಪೆಟ್ಟಿನಿಂದ ಹಿಂದಿನದ್ದು ಯಾವುದೂ ನೆನಪಿಲ್ಲದಿದ್ದರೂ, ಕಲೆ, ಕವನ ರಚನೆ ಮತ್ತು ಗಣಿತದ ಕ್ಲಿಷ್ಟ ಸಮಸ್ಯೆಗಳನ್ನು ಬಿಡಿಸುವ ಪ್ರತಿಭೆ ಸೇರಿಕೊಂಡಿದೆಯಂತೆ. ಇಡೀ ಜಗತ್ತಿನಲ್ಲಿ ಇದು ಅಪರೂಪದ ಪ್ರಕರಣವಾಗಿದ್ದು, ಪ್ರತಿಭೆ ಬಯಸುವವರು ಇಂತಹ ಅಪಘಾತ ಸಂಭವಿಸುವುದು ಹೇಗೆ ಎಂಬುದರ ಮೇಲೆ ಸಂಶೋಧನೆ ನಡೆಸಬಹುದು.



ನ್ಯೂಯಾರ್ಕ್‌ನಲ್ಲಿ ವಾರ್ಷಿಕ ಕಲಾ ಪ್ರದರ್ಶನ ನಡೆಯಿತು. ಎಸ್ಟೋನಿಯ ಕಲಾವಿದೆ ಕ್ರಿಸ್ ಮೈಮೇಲೆ ಚೀನಿ ಮಣ್ಣಿನಿಂದ ತಯಾರಿಸಿದ ಆಮೆ ಕವಚ ಹೊದ್ದು ಅದರ ಮೇಲೆ ದುಬಾರಿ ಅಲಂಕಾರಿಕ ಸಾಮಗ್ರಿಗಳನ್ನು ಇಟ್ಟುಕೊಂಡು ವಾಟರ್ ಬೆಡ್‌ನ ಮೇಲೆ ಮಲಗಿದ್ದಳು. ನಾಲ್ಕು ದಿನಗಳ ಕಾಲವೂ ಹೀಗೆ ಕವುಚಿ ಮಲಗುವುದೆಂದರೆ ಅದು ಕಲಾ ಪ್ರದರ್ಶನವೋ ಅಥವಾ ಸಾಹಸ ಪ್ರದರ್ಶನವೋ ಎಂದು ಕಲಾ ರಸಿಕರಿಗೆ ಕನ್‌ಫ್ಯೂಸ್ ಆಗಿರಬಹುದು.

ಸ್ಲೋವೇನಿಯ ಹಾಗೂ ಕ್ರೊಯೇಷಿಯಾ ಮಧ್ಯೆ ಕಿಂಗ್‌ಡಮ್ ಆಫ್ ಎನ್‌ಕ್ಲೇವ ಎಂಬ ಹೊಸ ದೇಶ ಉದಯವಾಗಿದೆ. ಇದರ ವಿಸ್ತೀರ್ಣ ಒಂದು ಸಾವಿರ ಚದರ ಅಡಿ. ಯಾರೂ ವಾಸವಾಗಿಲ್ಲ. ಮನೆಯ ಅಕ್ಕಪಕ್ಕ ಯಾರಿಗೂ ಸೇರದ ಜಾಗವಿದ್ದರೆ ಹುಷಾರು. ಅದನ್ನೇ ಒಂದು ಮೈಕ್ರೋ ರಾಷ್ಟ್ರವನ್ನಾಗಿ ಘೋಷಿಸಿಬಿಡಬಹುದು, ಅದಕ್ಕೊಬ್ಬ ಅಧ್ಯಕ್ಷನೋ, ರಾಜನೋ ಬಂದುಬಿಡಬಹುದು.




ಜರ್ಮನಿಯ ಆ್ಯಂಡ್ರೆ ಮರದಲ್ಲಿ ತಯಾರಿಸಿದ ಯಮಾಹ ಬೈಕ್. 12 ವರ್ಷಗಳ ಕಾಲ ಕಷ್ಟಪಟ್ಟು ಮೂಲ ಯಮಹಾ ಬೈಕ್‌ನ ಪ್ರತಿಕೃತಿಯನ್ನು ತಯಾರಿಸಿದ್ದಾನಂತೆ. ಮನೆಯೊಳಗೆ ಹಾಲ್‌ನಲ್ಲಿ ಹಳೆಯ ಯಮಹಾ ಬೈಕ್ ಅನ್ನು ಇಟ್ಟುಕೊಳ್ಳಲು ಆತನ ಪತ್ನಿ ಒಪ್ಪದಿರುವುದರಿಂದ ಆ್ಯಂಡ್ರೆ ಇಷ್ಟೆಲ್ಲ ಕಷ್ಟಪಡಬೇಕಾಯ್ತಂತೆ. ಅತ್ತ ಬೈಕನ್ನೂ ಬಿಡಲಾರ, ಇತ್ತ ಪತ್ನಿಯನ್ನೂ ದೂರ ಮಾಡಲಾರ. ಹಾಗಾಗೇ 12 ವರ್ಷಗಳ ಹೋರಾಟ.

ಪೆನ್‌ಸಿಲ್ವೇನಿಯಾದ ಹೀಲ್‌ಶೇರ್‌ಗೆ ಮನೆಯಲ್ಲೇ ಅಯರ್ನ್ ಮ್ಯಾನ್, ಸೂಪರ್ ಮ್ಯಾನ್ ಉಡುಗೆ ತಯಾರಿಸುವ ಹವ್ಯಾಸ. ಆದರೆ ಹೆದ್ದಾರಿ ಪಕ್ಕ ಈ ರೀತಿ ಅಯರ್ನ್ ಮ್ಯಾನ್ ಕಾಣಿಸಿದರೆ ಕಾರಿನ ಚಾಲಕ ಡೆಡ್ ಮ್ಯಾನ್ ಆಗಿಬಿಡಬಹುದು.

